ಪ್ರಾರಂಭಿಸದೆ ರಾಜ್ಯದ ರೈತರು ಬಿತ್ತನೆ ಬೀಜ ಸಿಗದೆ ಬಹಿರಂಗ ಮಾರುಕಟ್ಟೆಯಲ್ಲಿ ಕಳಪೆ ಬೀಜ ಹೆಚ್ಚಿನ ಬೆಲೆಗೆ ಪಡೆದು ಮೋಸ ಹೋಗುತ್ತಿದ್ದಾರೆ. ಆದ್ದರಿಂದ ರಾಜ್ಯದ ರೈತರಿಗೆ ವಿತರಣೆ ಮಾಡಲು ಯಾವ ಯಾವ ಬಿತ್ತನೆ ಬೀಜ ಎಷ್ಟಿದೆ, ಈಗಾಗಲೇ ಕೃಷಿ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸ್ಟಾಕ್ ಇವೆ, ವಿತರಣೆ ಕೆಲಸ ಕೃಷಿ ಇಲಾಖೆಯ ಮೂಲಕ ಯಾವಾಗ ಪ್ರಾರಂಭಿಸಲಾಗುವುದು ಎಂಬ ವಿಷಯ ತಿಳಿಯಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೀಜ ವಿತರಣೆ ಕೆಲಸ ನಡೆಯುತ್ತಿದೆ, ಇಡೀ ಕರ್ನಾಟಕ ರಾಜ್ಯದಲ್ಲಿ ೩,೨೪.೭೦೮ ಕ್ವಿಂಟಾಲ್ ಬೀಜ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಸರ್ಟಿಫೈಡ್ ಸೀಡ್ಸ್ ೮೭ ಸಾವಿರ ಕ್ವಿಂಟಾಲ್ ಬೇಕಾಗಬಹುದು. ಸೀಡ್ ಕಾರ್ಪೊರೇಷನ್‌ನಿಂದ, ಆಯಿಲ್ ಸೀಡ್ ಕಾರ್ಪೊರೇಷನ್‌ನಿಂದ ಮತ್ತು ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಹಾಗೂ ಬೀಜ ನಿಗಮದಿಂದ ಈಗಾಗಲೇ ೨ ಲಕ್ಷ ಕ್ವಿಂಟಾಲ್ ಬೀಜ ವಿತರಣೆ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಜೋಳ ೪೮೫ ಕ್ವಿಂಟಾಲ್, ಮುಸುಕಿನ ಜೋಳ ೧೭೦ ಕ್ವಿಂಟಾಲ್, ರಾಗಿ ೨೮೫ ಕ್ವಿಂಟಾಲ್, ಭತ್ತ ೨೬೭೦ ಕ್ವಿಂಟಾಲ್, ಗೋಧಿ ೩೫ ಕ್ವಿಂಟಾಲ್, ದ್ವಿದಳಧಾನ್ಯ ೫೧೦ ಕ್ವಿಂಟಾಲ್ ಸನ್ ಫ್ಲವರ್ ೨೭೫ ಕ್ವಿಂಟಾಲ್, ಸೇಂಗಾ ೩೦೦ ಕ್ವಿಂಟಾಲ್, ಹತ್ತಿ ೩೨೩.೨೫ ಕ್ವಿಂಟಾಲ್ ಬೀಜ ಈಗಾಗಲೇ ಈ ಜಿಲ್ಲೆಯಲ್ಲಿ ದಾಸ್ತಾನು ಮಾಡಲಾಗಿದೆ. ಹಾಗೂ ಈ ವಿಚಾರದಲ್ಲಿ, ಇನ್ನು ಏನಾದರೂ ಸಮಸ್ಯೆ ಬಂದರೆ, ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

೧೨ ತುಮಕೂರು ಜಿಲ್ಲೆಯಲ್ಲಿ ಮುಂಗಾರು ಬಿತ್ತನೆಗೆ ಬೀಜಗಳ ವಿತರಣೆ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಹುವರ್ಷಗಳಿಂದ ಬಾರದೇ ಇದ್ದ ಭರಣಿ ಮಳೆ ಈ ವರ್ಷ ಬಂದು ಮುಂಗಾರು ಬಿತ್ತನೆಗೆ ಅಗತ್ಯ ಮತ್ತು ಲಾಭದಾಯಕವಾದ ಭರಣಿ ಮಳೆ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಬಂದಿರುತ್ತದೆ. ಆದರೆ ಬಿತ್ತನೆಗೆ ಅಗತ್ಯವಾದ ಜೋಳ, ಹೆಸರು ತೊಗರಿ ಉದ್ದಿನ ಬಿತ್ತನೆ ಬೀಜ ಸಿಗುತ್ತಿಲ್ಲ. ಯಾವುದೇ ಕೃಷಿ ಉಪ ನಿರ್ದೇಶಕರ ಆಫೀಸಿನಲ್ಲಿ ಸಿಗುತ್ತಿಲ್ಲ. ರೈತರು ಬಿತ್ತನೆ ಬೀಜಕ್ಕಾಗಿ ಪರದಾಡುತ್ತಿದ್ದಾರೆ ಆದ್ದರಿಂದ ರೈತರ ಬಿತ್ತನೆ ಬೀಜದ ಅವಶ್ಯಕತೆಯನ್ನು ಆರಿತು ರಾಜ್ಯ ಬೀಜ ನಿಗಮದಿಂದ ಸರ್ಕಾರ ತಕ್ಷಣ ಅವಶ್ಯಕ ವಿವಿಧ ಬಿತ್ತನೆ ಬೀಜಗಳನ್ನು ತಕ್ಷಣ ಭೂಮಿಯ ಹದ ಆರುವ ಮುನ್ನ ಒದಗಿಸಲು ಕ್ರಮ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತುಮಕೂರು ಜಿಲ್ಲೆಯಲ್ಲಿ ಈ ವರ್ಷ ೧೭ ೧೧೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಇದರ ಪೈಕಿ ಖಿರಾಫ್‌ಗಾಗಿ ೧೪.೭೬೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಆ ಪ್ರಕಾರ ಬೀಜ ನಿಗಮದ ಮೂಲಾಂತರ ೧.೨೭೦ ಕ್ವಿಂಟಾಲ್ ಬೀಜ ದಾಸ್ತಾನು ಆಗಿದೆ ವಿತರಣೆ ಕಾರ್ಯ ನಡೆಯುತ್ತಿದೆ, ಅದೇ ಪ್ರಕಾರ ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಈ ಬೀಜದ ಬೇಡಿಕೆಯನ್ನು ಪೂರೈಸುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ. ಕಾಟನ್ ಸಿ.ಹೆಚ್. ೫ ಸಮಸ್ಯೆ ಇದೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

೧೩ ಮೈಸೂರಿನಲ್ಲಿರುವ ಕೀರ್ತಿ ಫೈನಾನ್ಸ್‌ನ ಠೇವಣಿದಾರರಿಗೆ ಅನ್ಯಾಯವಾಗಿರುವುದರ ಬಗ್ಗೆ

ಶ್ರೀ ಪಿ.ಎಂ. ಚಿಕ್ಕಬೋರಯ್ಯ. — ಮೈಸೂರಿನ ಕೀರ್ತಿ ಫೈನಾನ್ಸ್ ಠೇವಣಿದಾರರಿಗೆ ವಂಚನೆ ಮಾಡಿದ್ದಾರೆ, ಹಣ ಪಡೆದವರಿಗೆ ಆಸಲೂ ಇಲ್ಲ. ಬಡ್ಡಿಯೂ ಇಲ್ಲ ಎಂಬ ಪರಿಸ್ಥಿತಿ ಒದಗಿದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡು ಈ ಸಂಸ್ಥೆಯಲ್ಲಿ ಹಣ ತೊಡಗಿಸಿದವರಿಗೆ ಹಣ ವಾಪಸ್ಸು ಕೊಡಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,— ಮೈಸೂರಿನ ಕೀರ್ತಿ ಫೈನಾನ್ಸ್ ಕಾರ್ಪೊರೇಷನ್‌ನವರು ಎಲ್ಲರಿಂದ ಹಣ ವಸೂಲ್ಮಾಡಿ, ಹಣ ಪಡೆದವರಿಗೆ ಆಸಲೂ ಇಲ್ಲ, ಬಡ್ಡಿಯೂ ಇಲ್ಲ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನಾನು ಉತ್ತರ ತರಿಸಿ ಕೊಡುತ್ತೇನೆ.